ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ ★ ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

'ಉತ್ಕೃಷ್ಟತಾ ಅಂತಃಸಾಮರ್ಥ್ಯ ಉಳ್ಳ' ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

ಊಟಿರಸ್ತೆ, ಮೈಸೂರು-570 025, ಕರ್ನಾಟಕ

GOLDEN JUBILEE JSS COLLEGE OF ARTS, COMMERCE & SCIENCE OOTY ROAD, MYSORE

1916 H.H. Jagadguru 2015 Dr. Sri Shivarathri Rajendra Mahaswamiji Centenary Celebrations

☎ 0821-2548236 & 2548380 Fax: 0821-2548238 E-mail: jssautonomous@gmail.com


ಪ್ರಕಟಣೆಯ ಕೃಪೆಗಾಗಿ

ದಿನಾಂಕ : 28.10.2016

## ಸಾಂಸ್ಕೃತಿಕ ಮತ್ತು ಜ್ಞಾನಯುಕ್ತವಾದ ಮೌಲ್ಯಗಳಿಂದ ಕೂಡಿದ ನೈತಿಕ ಶಿಕ್ಷಣ ಅತ್ಯವಶ್ಯಕ

– ಶ್ರೀಮತಿ ಮನೇಕ ಗಾಂಧಿ

ಮೈಸೂರು ಅಕ್ಟೋಬರ್ ೨೮, ನಗರದ ಬಿ.ಎನ್ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಕಾಲೇಜಿನ ಸುವರ್ಣಮಹೋತ್ಸವದ ಸಮಾರೋಪ ಸಮಾರಂಭವನ್ನು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ಆಯೋಜಿಸಲಾಗಿತ್ತು.

ಸಮಾರಂಭದ ಸಮಾರೋಪ ಭಾಷಣವನ್ನು ಮಾಡಿದ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಾದ ಶ್ರೀಮತಿ ಮನೇಕಾ ಗಾಂಧಿಯವರು "ಇಂದಿನ ಆಧುನಿಕ ಯುಗದಲ್ಲಿ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಶಿಕ್ಷಣ ಪದ್ಧತಿಯು ಬದಲಾಗಬೇಕಿದೆ. ಮಾನವನಿಗೆ ನೀಡುವ ಶಿಕ್ಷಣವೆಂದರೆ ಅದು ನೈತಿಕ ಶಿಕ್ಷಣವೆಂದೇ ಅರ್ಥ. ನೈತಿಕತೆ ಇಲ್ಲದೆ ಶಿಕ್ಷಣ ಶಿಕ್ಷಣವೇ ಅಲ್ಲ. ಇದರ ಜೊತೆಗೆ ಸಾಂಸ್ಕೃತಿಕ ಮತ್ತು ಜ್ಞಾನಯುಕ್ತವಾದ ಮೌಲ್ಯಗಳಿಂದ ಕೂಡಿದ ನೈತಿಕ ಶಿಕ್ಷಣವನ್ನು ನೀಡುವುದು ಪ್ರತಿಯೊಂದು ಶಿಕ್ಷಣ ಸಂಸ್ಥೆಗಳ ಗುರಿಯಾಗಬೇಕು. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳನ್ನೆ ಮುಖ್ಯನೆಲೆಯಲ್ಲಿ ಇಟ್ಟುಕೊಂಡು ನಡೆಸುತ್ತಿರುವ ಈ ಶಿಕ್ಷಣ ಸಂಸ್ಥೆ ಈ ಅವಶ್ಯಕತೆಯನ್ನು ಪೂರೈಸುತ್ತಿದೆ" ಎಂದರು. ಮುಂದುವರೆದು "ಬೇಸಿಗೆ ರಜೆಯ ಶಾಲೆಯ ಪರಿಕಲ್ಪನೆಯನ್ನು ತಿಳಿಸುತ್ತಾ ಇಂದಿನ ವಿದ್ಯಾರ್ಥಿಗಳಿಗೆ ಬೇಸಿಗೆ ರಜೆಯ ಸಂದರ್ಭದಲ್ಲಿ ವಿವಿಧ ಧರ್ಮ ತತ್ವಗಳ ಪರಿಚಯವನ್ನು ಮಾಡಿಕೊಡುವ ರೀತಿಯ ಶಾಲೆಗಳನ್ನು ನಡೆಸಬೇಕು. ಇದರಿಂದ ವಿದ್ಯಾರ್ಥಿಗಳಲ್ಲಿ ಸಂಸ್ಕಾರಯುತವಾದ ಜ್ಞಾನ, ನೈತಿಕತೆ, ವಿಶಾಲ ಮನೋಭಾವ, ಮಾನವೀಯ ಗುಣ ಮತ್ತು ಮೌಲ್ಯಗಳು ಮೂಡುತ್ತವೆ." ಎಂದು ತಿಳಿಸಿದರು.

'ಸುವರ್ಣ ದೀಪ್ತಿ' ಸ್ಮರಣಸಂಚಿಕೆಯನ್ನು ಬಿಡುಗಡೆ ಮಾಡಿ ಮಾತನಾಡಿದ ರಾಜ್ಯದ ಸಹಕಾರ ಮತ್ತು ಸಕ್ಕರೆ ಸಚಿವರಾದ ಶ್ರೀ ಎಚ್.ಎಸ್. ಮಹದೇವಪ್ರಸಾದ್ ಅವರು "ಸುವರ್ಣ ದೀಪ್ತಿ ಸಂಚಿಕೆಯು ಸುವರ್ಣಮಹೋತ್ಸವದ ಆಚರಣೆಯ ಕೈಪಿಡಿಯಾಗಿದೆ. ಗ್ರಾಮೀನ ವಿದ್ಯಾರ್ಥಿಗಳಿಗೆ ಶಿಕ್ಷಣ ದೊರಕಬೇಕೆಂಬ ಡಾ. ಶ್ರೀ ರಾಜೇಂದ್ರ ಸ್ವಾಮಿಗಳ ಸಂಕಲ್ಪವನ್ನು ಈ ಕಾಲೇಜು ಯಶಸ್ವಿಯಾಗಿ ನಿರ್ವಹಿಸಿಕೊಂಡು ಬರುತ್ತಿದೆ. ಈ ಕಾಲೇಜಿನಲ್ಲಿ ನಾನು ವಿದ್ಯಾರ್ಥಿಯಾಗಿದ್ದ ಕಾರಣವಾಗಿಯೇ ರಾಜಕೀಯ ಕ್ಷೇತ್ರದಲ್ಲಿ ಪ್ರವೇಶ ಮಾಡಲು ಸಾಧ್ಯವಾಯಿತು. ಕಾಲೇಜು ಪ್ರತಿಯೊಬ್ಬ ವಿದ್ಯಾರ್ಥಿಯ ವ್ಯಕ್ತಿತ್ವವನ್ನು ಶೈಕ್ಷಣಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬೆಳೆಸುತ್ತದೆ" ಎಂದು ಹೇಳಿ ತಮ್ಮ ಕಾಲೇಜು ದಿನಗಳನ್ನು ಮೆಲುಕು ಹಾಕಿದರು.

ನಂತರ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ.ಕೆ.ಎಸ್. ರಂಗಪ್ಪನವರು 'ಪೌರಾಣಿಕ ದೃಶ್ಯಪಥ' ಕೃತಿಯನ್ನು ಬಿಡುಗಡೆ ಮಾಡಿ "ನಿರ್ಲಕ್ಷಿತ ಸಮುದಾಯಕ್ಕೆ ಶಿಕ್ಷಣವನ್ನು ನೀಡುವ ಶ್ರೇಷ್ಠ ಕೆಲಸವನ್ನು ಜೆಎಸ್‌ಎಸ್ ಸಂಸ್ಥೆ ಆರಂಭದಿಂದಲೂ ಮಾಡಿಕೊಂಡು ಬಂದಿದೆ. ಡಾ. ಶ್ರೀ ರಾಜೇಂದ್ರಸ್ವಾಮಿಗಳವರ ಕನಸುಗಳನ್ನು ಅರ್ಥಮಾಡಿಕೊಂಡು ಇಂದು ಜೆಎಸ್‌ಎಸ್ ಕಾಲೇಜು ಸುವರ್ಣಮಹೋತ್ಸವವನ್ನು ಆಚರಿಸುತ್ತಿರುವುದು ಅಭಿನಂದನೀಯ" ಎಂದರು.

ಬೆಂಗಳೂರಿನ ಇಸ್ರೋನ ಅಧ್ಯಕ್ಷರಾದ ಡಾ. ಎ.ಎಸ್. ಕಿರಣ್‌ಕುಮಾರ್ ಅವರು 'ಶರಣ ಸಂಸ್ಕೃತಿ–ಸಾಹಿತ್ಯ–ವಿಮರ್ಶೆ' ಮತ್ತು 'ವ್ಯಕ್ತಿಚಿತ್ರಗಳು' ಕೃತಿಯನ್ನು ಬಿಡುಗಡೆ ಮಾಡಿ "ಜೆಎಸ್‌ಎಸ್ ಸಂಸ್ಥೆ ಆರಂಭದಿಂದಲೂ ನಿರಂತರವಾಗಿ ಗ್ರಾಮೀಣ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ನೀಡುವ ಗುರಿಯನ್ನು ಅಚಲವಾಗಿ ಕಾಯ್ದುಕೊಂಡು ಬಂದಿದೆ. ವಿಜ್ಞಾನ ತಂತ್ರಜ್ಞಾನದ ಬೆಳಕಿನೊಂದಿಗೆ ಸರ್ವರಿಗೂ ಧರ್ಮ, ಆಧ್ಯಾತ್ಮಿಕ ನೈತಿಕ ಶಿಕ್ಷಣವನ್ನು ನೀಡುತ್ತಾ ಬಂದಿರುವುದು ಶ್ಲಾಘನೀಯವಾದ ಕಾರ್ಯವಾಗಿದೆ" ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಸಾರಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಸಿ ಮಹದೇವಪ್ಪನವರು ಮಾತನಾಡುತ್ತಾ "ಈ ಸಂಸ್ಥೆಯ ನಿರ್ಮಾಣದ ಹಿಂದೆ ಡಾ. ಶ್ರೀ ರಾಜೇಂದ್ರ ಸ್ವಾಮಿಗಳವರ ಸಂಕಲ್ಪಗಳು ಹಾಗೂ ಅದಕ್ಕೆ ಪೂರಕವಾದ ದೃಢವಾದ ಬದ್ಧತೆ ಇತ್ತು. ಆ ಕಾರಣವಾಗಿಯೇ ಇಂದು ಶಿಕ್ಷಣಗಳು ದೇಶ–ವಿದೇಶಗಳಲ್ಲಿ ತಲೆಎತ್ತಿ ಸಾಂಸ್ಕೃತಿಕ ಕಾರ್ಯವನ್ನು ನಿರ್ವಹಿಸುತ್ತಿವೆ. ಜೆಎಸ್‌ಎಸ್ ಸಂಸ್ಥೆಗಳು ಸದಾ ಕಾಲ ಸಮಾನತೆ ಮತ್ತು ವೈಜ್ಞಾನಿಕ ಚಿಂತನೆಗಳನ್ನು ಮಾಡುತ್ತಿರುವುದು ವಿಶೇಷವಾಗಿದೆ. ಕಾಲೇಜು ಕೂಡ ಸುವರ್ಣಮಹೋತ್ಸವದ ಅಂಗವಾಗಿ ವರ್ಷವೆಲ್ಲಾ ನಡೆಸಿಕೊಂಡು ಬಂದಿರುವ ಕಾರ್ಯಕ್ರಮಗಳು ಹೆಚ್ಚು ಔಚಿತ್ಯಪೂರ್ಣವಾಗಿರುವುದು ಇದಕ್ಕೆ ಸಾಕ್ಷಿಯಾಗಿದೆ" ಎಂದರು.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಆಶೀರ್ವಚನದಲ್ಲಿ "ಡಾ. ರಾಜೇಂದ್ರ ಶ್ರೀಗಳು ಸದ್ಭಾವನೆಯಿಂದ ಸಮಾಜದ ಸರ್ವತೋಮುಖ ಏಳ್ಗೆಗೆ ಬಿತ್ತಿದ ಬೀಜದಿಂದ ಇಂದು ಸತ್ಫಲವನ್ನು ಸಮಾಜವು ಪಡೆಯುತ್ತಿದೆ. ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು ಇಂದು ರಾಷ್ಟ್ರ ಮಟ್ಟದ ಮಾನ್ಯತೆಗಳನ್ನು ಪಡೆದುಕೊಳುತ್ತಿವೆ. ಈ ಕಾಲೇಜು ಇಂದು ಗ್ರಾಮೀಣ ಮತ್ತು